## ಪ್ರಾರ್ಥನೆ

### ಜಗದ್ಧಾತ್ರೀ ಸ್ತವದಿಂದ

ಆಧಾರಭೂತೇ ಚಾಧೇಯೇ
ಧೃತಿರೂಪೇ ಧುರಂಧರೇ ।
ಧ್ರುವೇ ಧ್ರುವಪದೇ ಧೀರೇ
ಜಗದ್ಧಾತ್ರಿ ನಮೋಽಸ್ತು ತೇ ॥

ಹೇ ತಾಯಿ, ನೀನು ಈ ವಿಶ್ವಕ್ಕೆಲ್ಲ ಆಧಾರಳು. ಈ ವಿಶ್ವದಲ್ಲಿರುವ ಸರ್ವಸ್ವವೂ ಕೂಡ ನೀನೇ. ಎಲ್ಲರನ್ನೂ ರಕ್ಷಿಸುವವಳೂ ನೀನೇ, ಎಲ್ಲರ ಭಾರವನ್ನೂ ಹೊರುವವಳು ನೀನೇ. ನೀನು ನಿತ್ಯವಾಗಿರುವವಳು, ನೀನೇ ಜೀವನದ ಗುರಿ, ನೀನೇ ನಮಗೆ ಶಾಂತಿಯನ್ನು ಕರುಣಿಸುವವಳು. ಜಗತ್ತನ್ನು ಧರಿಸಿ ಕಾಪಾಡುವವಳೇ, ನಿನಗೆ ನಮಸ್ಕಾರ.

ಜಯದೇ ಜಗದಾನಂದೇ
ಜಗದೇಕ–ಪ್ರಪೂಜಿತೇ ।
ಜಯ ಸರ್ವಗತೇ ದುರ್ಗೇ
ಜಗದ್ಧಾತ್ರಿ ನಮೋಽಸ್ತು ತೇ ॥

ಜಯವನ್ನು ನೀಡುವವಳು ನೀನು. ಈ ಜಗತ್ತಿನಲ್ಲಿರುವ ಎಲ್ಲ ಆನಂದದ ಮೂಲ ನೀನೇ. ನೀನೊಬ್ಬಳೇ ಆರಾಧ್ಯಳು. ನಿನಗೆ ಜಯವಾಗಲಿ. ಎಲ್ಲವನ್ನೂ ವ್ಯಾಪಿಸಿರುವ ನೀನು ಮಾನವರ ಕಷ್ಟಗಳನ್ನು ಪರಿಹರಿಸುತ್ತೀಯೆ. ಹೇ ಜಗದ್ರಕ್ಷಕಿಯೆ, ನಿನಗೆ ನಮಸ್ಕಾರ.

ಸೂಕ್ಷ್ಮಾತಿಸೂಕ್ಷ್ಮರೂಪೇ ಚ
ಪ್ರಾಣಾಪಾನಾದಿರೂಪಿಣೀ।
ಭಾವಾಭಾವಸ್ವರೂಪೇ ಚ
ಜಗದ್ಧಾತ್ರಿ ನಮೋಽಸ್ತು ತೇ॥

ಅತ್ಯಂತ ಸೂಕ್ಷ್ಮಕ್ಕಿಂತ ಸೂಕ್ಷ್ಮ ಸ್ವರೂಪಳು ನೀನು. ಎಲ್ಲ ಜೀವಿಗಳ ಉಸಿರೇ ನೀನು. ಇರುವುದು, ಇಲ್ಲದ್ದು–ಎಲ್ಲವೂ ನೀನೇ ಆಗಿರುವೆ. ಜಗತ್ತನ್ನು ರಕ್ಷಿಸುವವಳೇ, ನಿನಗೆ ನಮಸ್ಕಾರ.

## ಸೂಕ್ತಿಪ್ರಭ

- ನೀವು ಚಿರಯುವಕರಾಗಿ ಇರಬೇಕೆ? ಪ್ರತಿನಿತ್ಯವೂ ಒಂದು ಸುಂದರವಾದ ಪದ್ಯವನ್ನು ಓದಿ, ಸುಶ್ರಾವ್ಯವಾದ ಒಂದು ಹಾಡನ್ನು ಕೇಳಿ. ಸಂಗೀತವನ್ನು ಆಲಿಸಿ, ಒಳ್ಳೆಯ ಒಂದು ಚಿತ್ರವನ್ನು ನೋಡಿ. ಮತ್ತು, ಸಾಧ್ಯವಾದರೆ ಒಂದು ಉಪಕಾರದ ಕೆಲಸ ಮಾಡಿ. –ಗಯಟೆ
- ಕಾಸು ಕೊಟ್ಟಾದರೂ ನಾವು ಸುಳ್ಳು ಪ್ರಶಂಸೆಯನ್ನು ಕೊಂಡುಕೊಳ್ಳುತ್ತೇವೆ. ಆದರೆ ಒಳ್ಳೆಯ ಟೀಕೆಗಳಿಗೆ ಸಿದ್ಧವಾಗಿರುವುದಿಲ್ಲ. –ಅನಾಮಿಕ
- ನಮ್ಮ ಶರೀರವನ್ನು ವಿನಾಶಗೊಳಿಸಲು ಚಿಂತೆಯಂಥ ವಸ್ತು ಮತ್ತೊಂದಿಲ್ಲ. ಆದರೆ, ಭಗವಂತನನ್ನು ನಂಬುವ ನೀವು ಚಿಂತೆ ಮಾಡುತ್ತೀರಿ ಎಂದರೆ ಅದು ನಾಚಿಕೆಯ ಸಂಗತಿ. –ಮಹಾತ್ಮ ಗಾಂಧಿ
- ನನ್ನ ಶತ್ರುಗಳೇ ನನ್ನ ನಿಜವಾದ ಸ್ನೇಹಿತರು. ಬಯ್ಯುವವರೆನ್ನ ಬಂಧುಗಳು. ನನ್ನ ತಪ್ಪುಗಳನ್ನು ತೋರಿಸಿ ನನ್ನನ್ನು ದಿವ್ಯದ ಮಾರ್ಗದಲ್ಲಿ ನಡೆಸುವ ಬಂಧುಗಳು ಇವರು. –ಆಚಾರ್ಯ ವಿನೋಬಾ ಭಾವೆ
- ತರ್ಕವೆಂಬುದು ನಮ್ಮ ಬುದ್ಧಿಯ ಕಣ್ಣು. – ಶೇಕ್ಸ್‌ಪಿಯರ್
- ನಾನು ಉಪಾಧ್ಯಾಯ ವೃತ್ತಿಯನ್ನು ಆಯ್ದುಕೊಂಡದ್ದು, ಕಲಿಸುವುದಕ್ಕಿಂತಲೂ ಮಿಗಿಲಾಗಿ ನನ್ನ ಶಿಷ್ಯರ ಮೂಲಕ ಕಲಿಯುವುದಕ್ಕಾಗಿ. –ದೆಲ್ಲುಜಿ
- ನಮ್ಮಲ್ಲಿ ಹೆಚ್ಚು ಜನ ಪ್ರಯತ್ನಪೂರ್ವಕವಾಗಿ ಶ್ರಮಪಟ್ಟು ಕಳಪೆತನವನ್ನು ಗಳಿಸುತ್ತೇವೆ. ಕೆಲವು ಅದೃಷ್ಟವಂತರು ಅಪ್ರಯತ್ನಪೂರ್ವಕವಾಗಿ ಮಹತ್ತನ್ನು ಸಾಧಿಸಿಬಿಡುತ್ತಾರೆ. –ಇ. ಸ್ಟಾನ್ಲಿ ಜೋನ್ಸ್
- ನಗುವಾಗ ನಿಮ್ಮ ಮುಖದಲ್ಲಿ ಬೆಳಕು ಇರುತ್ತದೆ. ಎದುರಿನವನ ಹೃದಯಕ್ಕೆ ಹಿತವಾದ ಬೆಚ್ಚಗಿನ ಅನುಭವ ಆಗುತ್ತದೆ. ಆದ್ದರಿಂದ ದಯವಿಟ್ಟು ನಗುನಗುತ್ತ ಇರಿ. – ಪೀಟರ್ ಬ್ರಿಗ್ಸ್
- ಹೊಂದಿಕೊಂಡೂ ಹೋಗುತ್ತಿರಿ, ಮುಂದೆ ಮುಂದೆ ಹೋಗುವುದನ್ನೂ ಕಲಿಯುತ್ತೀರಿ. ಅದಕ್ಕೇ ಹೇಳುವುದು, ಸಹಕಾರ ಮತ್ತು ಯಶಸ್ಸು ಪರಸ್ಪರ ಅವಲಂಬಿಗಳು ಎಂದು.
- ಒಂದು ಕೆಲಸವನ್ನು ಏಕೆ ಸರಿಯಾಗಿ ಮಾಡಲು ಸಾಧ್ಯವಾಗಲಿಲ್ಲ ಎಂದು ಬೇರೆಯವರಿಗೆ ವಿವರಿಸುವುದಕ್ಕಿಂತ ಅದಕ್ಕೂ ಕಡಮೆ ಸಮಯದಲ್ಲಿ ಮತ್ತೊಮ್ಮೆ ಪ್ರಯತ್ನಿಸಿ. ಆಗ ಅದೇ ಕೆಲಸವನ್ನು ಸರಿಯಾಗಿ ಮಾಡಿಬಿಡಬಹುದು.